ಬಳಕೆಯಾಗುತ್ತಿತ್ತು. ಮೇಲ್ಜಾತಿಯ ಸಹಪಾಠಿಗಳಲ್ಲಿ ಕೆಲವರು ನನ್ನನ್ನು ಕುಂಬಾರ ಎಂದು ಸಂಬೋಧಿಸುತ್ತಿದ್ದರು. ಬಡತನರೇಖೆಯ ಆಜುಬಾಜಲ್ಲಿದ್ದ ಕೀಳರಿಮೆಯಿಂದ ಬಿಡುಗಡೆಗೊಳ್ಳಲು ಪರ್ಯಾಯ ಹಾಗು ಹೆಚ್ಚುವರಿ ಪ್ರತಿಭೆಯನ್ನು ಆವಹಿಸಿಕೊಳ್ಳುವುದು ಮುಖ್ಯವೆಂದು ಭಾವಿಸಿದ್ದು ಆರನೆ ತರಗತಿಯಲ್ಲಿದ್ದಾಗ. ಅಷ್ಟೊತ್ತಿಗಾಗಲೆ ನಿಷ್ಣಾತ ಮೌಖಿಕ ಕಥೆಗಾರನೆಂದು ಕುಖ್ಯಾತನಾಗಿದ್ದೆ. ತರಗತಿಗಳಲ್ಲಿ ಶಿಕ್ಷಕರು ನನ್ನಿಂದ ಕಥೆಗಳನ್ನು ಹೇಳಿಸುತ್ತಿದ್ದರು. ಅದು ಪಠ್ಯೇತರ ಚಟವಟಿಕೆಯಾಗಿತ್ತಲ್ಲದೆ ಮನರಂಜನೆಯೂ ಆಗಿತ್ತು. ಆಲಿಸಿದ ಕತೆಗಳು ಮರುನಿರೂಪಿಸುವಾಗ ಹೊಸ ಆಕಾರ ಪಡೆದಿರುತ್ತಿದ್ದವು. ಕೆಲವು ಹ್ರಸ್ವಕಥೆಗಳು ಕಾಲ್ಪನಿಕ ಸೌಲಭ್ಯದಿಂದ ದೀರ್ಘ ಕಥೆಗಳಾಗಿ ಬಡ್ತಿ ಪಡೆದಿರುತ್ತಿದ್ದವು. ಅದರಿಂದ ಸಹಪಾಠಿಗಳ ಶಿಕ್ಷಕರ ವಿಸ್ಮಯ ನೋಟಕ್ಕೆ ಭಾಜನನಾಗುತ್ತಿದ್ದೆ. ಕಥೆಗಳ ದಾಹ ತಣಿಸಲು ಗ್ರಂಥಾಲಯದ ನೆರವು ಪಡೆಯುವುದು, ಪ್ರದೇಶ ಸಮಾಚಾರ ಆಲಿಸುವುದು, ವೃತ್ತಪತ್ರಿಕೆಗಳಲ್ಲಿನ ಕೆಲವು ಮುಖ್ಯಾಂಶ ಬರೆದುಕೊಳ್ಳುವುದು ಪಠ್ಯೇತರ ಆಸ್ವಾದನೆಯ ಭಾಗವಾಗಿತ್ತು. ಆರನೆ ತರಗತಿ ಸೇರಿದೊಡನೆ ಪತ್ತೇದಾರಿ ಕಾದಂಬರಿಗಳನ್ನು ಕಣ್ಣಿಂದ ಅರೆದು ಕುಡಿಯಲಾರಂಭಿಸಿದೆ. ನರಸಿಂಹಯ್ಯ, ಸುಂದರರಾಜ್ ರಾಮಮೂರ್ತಿಯವರಿಂದ ಆರಂಭಿಸಿದ ನನ್ನ ವಾಚನಾಭಿಯಾನ ಕೊರಟಿ, ತರಾಸು, ಅನಕೃ, ಭೈರಪ್ಪನವರಂಥ ಅತಿರಥರನ್ನು ದಾಟಿ ಬೇಂದ್ರೆ, ಕುವೆಂಪುರವರಂಥ ಮಹಾರಥರವರೆಗೆ ತಲುಪಿತು. ಕಥೆ ಹೇಳಲೆಂದೆ ಕಾದಂಬರಿಗಳನ್ನು ಓದಿ ಅರಗಿಸಿಕೊಳ್ಳತೊಡಗಿದ್ದು. ಓದಿರುತ್ತಿದ್ದುದೇ ಒಂದು, ಹೇಳುತ್ತಿದ್ದುದು ಇನ್ನೊಂದು. ಸೃಜನಶೀಲ ಮರುನಿರೂಪಣೆ, ಮರುಜೀವಣೆ ಕೇಳುಗರನ್ನು ಮಾತ್ರವಲ್ಲದೆ ಹೇಳುವ ನನ್ನನ್ನೂ ಮಂತ್ರಮುಗ್ಧನ್ನಾಗಿಸುತ್ತಿತ್ತು.

ಏಳನೆ ತರಗತಿ ಪಾಸಾದ ಸುವಾರ್ತೆಯಿಂದ ಅಪ್ಪ ಹಿಗ್ಗಿದ. ದೂರದ ಹೈಸ್ಕೂಲಿಗೆ ಸೇರಿಸಬಹುದೆಂಬ ನಿರೀಕ್ಷೆಯನ್ನು ಅಪ್ಪ ಹುಸಿಗೊಳಿಸಲಿಲ್ಲ. ಅಲ್ಲಿ ಅಸಂಖ್ಯಾತ ವಿದ್ಯಾರ್ಥಿಗಳು ಶಿಕ್ಷಕರು! ಇಂಥ ಟಾಕುಟೀಕು ಮೃಗಾಲಯ ಸದೃಶ ವಾತಾವರಣ ಯಾವ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕಿಂತ ಕಡಿಮೆ ಇರಲಿಲ್ಲ. ಕೀಳರಿಮೆ ದ್ವಿಗುಣಗೊಂಡ ಪರಿಣಾಮ ಜ್ವರದಿಂದ ನರಳಲಾರಂಭಿಸಿದೆ. ಕನವರಿಕೆಯಲ್ಲಿ ಹೈಸ್ಕೂಲನ್ನು ಶಪಿಸತೊಡಗಿದೆ (ಇದೇ ಅನುಭವ 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಕತೆಯಲ್ಲಿ ಬಂದಿದೆ. ಅದು 'ಕೊಟ್ರೇಶಿ ಕನಸು' ಹೆಸರಿನ ಸಿನಿಮಾ ಆಗಿದೆ). ಎಂಟನೆ ತರಗತಿ ಸ್ಕೂಲ್ ಡೆ ಸಮಾರಂಭದಲ್ಲಿ ಹಾಡಿ ('ಚಂದವಳ್ಳಿ ತೋಟ' ಚಿತ್ರದ 'ಓ ನನ್ನ ದೇಶ ಬಾಂಧವರೆ' ಹಾಡು) ಸಹಪಾಠಿಗಳ ನಗೆಪಾಟಲಿಗೆ ಗುರಿಯಾಗಿದ್ದುಂಟು. ಬಳಿಕ ಒಂದೇ ವರ್ಷದಲ್ಲಿ ಹಾಡು, ಕಾವ್ಯವಾಚನ, ಪ್ರಬಂಧ ಹಾಗು ಚಿತ್ರಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಪಡೆದೆನೇನೊ ಸರಿ, ಆದರೆ..

ಎಂಟನೆ ತರಗತಿಯಲ್ಲಿ ಅಂಬೆಗಾಲಿಡುತ್ತ ಆಗಮಿಸಿದ ಬಡತನ ಒಂಬತ್ತನೆ ತರಗತಿ ಹೊತ್ತಿಗೆ ಜಠರ ಕರುಳುಗಳನ್ನು ಆವರಿಸಿತು. ಎಂಥ ಬಡತನವೆಂದರೆ ಹಸಿವೆ ಕಾರಣದಿಂದ ಸತ್ತ ತಂಗಿ ರತ್ನಳ ಶವಸಂಸ್ಕಾರವನ್ನು ಗುಟ್ಟಾಗಿ ಮಾಡಬೇಕಾಗಿ ಬಂತು. ಹುಮ್ಮಸ್ಸು ಹದಿಹರೆಯದ ಕನಸುಗಳಿರದಿದ್ದ ಭೀಭತ್ಸ ವರ್ಷದಲ್ಲಿ ವಿದ್ಯಾರ್ಥಿ ಸಹಜ ಆಕರ್ಷಣೆ ಎಲ್ಲಿರಲಾದೀತು! ವೀರಭದ್ರಯ್ಯ ಹೆಸರಿನ ಇಂಗ್ಲಿಷ್ ಶಿಕ್ಷಕ 'ಈ ತರಗತಿಯಲ್ಲಿನ ದಡ್ಡ ಸೂಳ್ಯಾಮಕ್ಕಳೆಂದರೆ ಅಗೋ ಅಲ್ಲಿ!' ಎಂದು ಮೂಲೆಯಲ್ಲಿ ಮುದುಡಿ ಕುಳಿತಿರುತ್ತಿದ್ದ ನನ್ನನ್ನು ಮತ್ತು ಸಹಪಾಠಿ ಬಾಷಾನನ್ನು ತೋರಿಸಿದರು. ಕುಂಬಾರನಾದ ನಾನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದರೆ, ಬಾಷಾ ಹೊಸಪೇಟೆ ಉಕ್ಕಿನ ಕಾರ್ಖಾನೆ ಮ್ಯಾನೇಜರನಾದ. ಮುಂದೆ ವಿಷಯ ತಿಳಿದ ಈ ಇಂಗ್ಲಿಷ್ ಶಿಕ್ಷಕ